ವಾರದ ಪತ್ರ

## ಸಂಪ್ರದಾಯಕ್ಕೆ ವೈಜ್ಞಾನಿಕ ತರ್ಕ

ಕಲರ್ಸ್ ಕನ್ನಡದ ‘ರಾಮಾಚಾರಿ’ ಸ್ವಲ್ಪ ಅತಿಶಯೋಕ್ತಿ ಅನಿಸಿದರೂ, ನಮ್ಮ ಆಚಾರ, ವಿಚಾರ ಮತ್ತು ಸಂಪ್ರದಾಯವನ್ನು ಪ್ರತಿಬಿಂಬಿಸುವ ಪ್ರಯತ್ನ ಮಾಡುತ್ತಿದೆ. ಕೆಲವೊಂದು ಸನ್ನಿವೇಶದಲ್ಲಿ ಭಗವದ್ಗೀತೆ, ಮಂಕುತಿಮ್ಮನ ಕಗ್ಗ, ಕನ್ನಡದ ಪ್ರಮುಖ ಕವಿಗಳ ಕವನಗಳ ಸಾಲುಗಳನ್ನು ಉಲ್ಲೇಖ ಮಾಡುವುದು ಶ್ಲಾಘನೀಯ. ನಮ್ಮ ಸಂಪ್ರದಾಯದ ಆಚರಣೆಗಳ ಹಿಂದೆ ಇರುವ ವೈಜ್ಞಾನಿಕ ಮಹತ್ವವನ್ನು ತಿಳಿಸುವ ಸನ್ನಿವೇಶಗಳು ಮನಸ್ಸಿಗೆ ಮುದ ನೀಡುತ್ತವೆ.

—ಶಾಲಿನಿ ಮನೋಹರ್, ಬೆಂಗಳೂರು

## ‘ಗೀತಾ’ಳಿಗೊಂದು ಪ್ರಶ್ನೆ

ಕಲರ್ಸ್‌ನ ‘ಗೀತಾ’ ಧಾರಾವಾಹಿಯ ನಿರ್ಮಾತೃಗಳೇ – ಭಾನುಮತಿ ಮತ್ತು ಸಿತಾರಾ ಎಂಬ ನರರಾಕ್ಷಸರಿಂದ ಇನ್ನೂ ಎಷ್ಟು ಕೊಲೆ ಮಾಡಿಸಬೇಕೆಂದಿದ್ದೀರಿ? ವಿಜಿಯನ್ನೂ ಕೊಲೆ ಮಾಡಿಸಿ ಗೀತಾಳನ್ನು ವಿಧವೆ ಮಾಡಿ, ಭಾನುಮತಿಯನ್ನು ಮಂತ್ರಿಯನ್ನಾಗಿಸುವವರೆಗೂ ನೆಮ್ಮದಿಯಿಲ್ಲವೆಂದು ತೋರುತ್ತದೆ. ಇಂತಹದೊಂದು ಕಥೆಯಿಂದ ಸಮಾಜಕ್ಕೆ ಏನು ಪ್ರಯೋಜನ? ದಯವಿಟ್ಟು ತಿಳಿಸಿ.

—ಸಿ.ಆರ್. ಶ್ರೀನಿವಾಸ, ಬೆಂಗಳೂರು

## ವಿರೋಧಾಭಾಸ

ಚಂದನದ ‘ಥಟ್ ಅಂತ ಹೇಳಿ’ ರಸಪ್ರಶ್ನೆ ಕಾರ್ಯಕ್ರಮ ಲಿಮ್ಕಾ ದಾಖಲೆ ನಿರ್ಮಿಸಿದೆ. ದಶಕ ಕಳೆದರೂ ಅದು ವೀಕ್ಷಕರನ್ನು ಇನ್ನೂ ಹಿಡಿದಿಟ್ಟುಕೊಂಡಿದೆ. ನಮ್ಮ ನೆಲದ ಜನಪದ ಸೊಗಡನ್ನು ಬಿಂಬಿಸುವ ಒಗಟುಗಳನ್ನು ಸ್ಪರ್ಧಿಗಳಿಗೆ ಕೇಳುವುದು ಅದ್ಭುತ. ಮೊನ್ನೆ ಪ್ರಸಾರವಾದ ಈ ಸರಣಿಯ ‘ಚಟ್‌ಪಟ್ ಚಿನಕುರುಳಿ’ ಎಂಬ ಪ್ರಶ್ನಾವಳಿಯಲ್ಲಿ ಸ್ಪರ್ಧಿಯೊಬ್ಬರಿಗೆ ನಿರೂಪಕರು ‘ಆನಂದ’ ಪದದ ವಿರುದ್ಧ ಪದ ಕೇಳಿದರು. ದುಃಖ ಎಂಬ ಸರಿ ಉತ್ತರವನ್ನೇ ಸ್ಪರ್ಧಿ ನೀಡಿದರು. ಆದರೆ ಇದು ತಪ್ಪು ಉತ್ತರ; ದ್ವೇಷ ಸರಿ ಉತ್ತರ ಎಂದು ಹೇಳಿ, ಆ ಸ್ಪರ್ಧಿಗೆ ಅಂಕ ಕಡಿತ ಮಾಡಿದರು. ವಿಲೋಮ ಶಬ್ದಗಳನ್ನು ಹೇಳುವಾಗ ಸಾಮಾನ್ಯವಾಗಿ ಪ್ರೀತಿ–ದ್ವೇಷ ಎಂಬ ಪದಪ್ರಯೋಗಗಳು ಉಂಟು. ಇವುಗಳನ್ನು ಸಣ್ಣಪುಟ್ಟ ತಪ್ಪುಗಳು ಎಂದು ಪರಿಗಣಿಸುವುದೂ ತಪ್ಪೇ ಅಲ್ಲವೇ?

—ಟಿ.ಎಸ್. ಪ್ರತಿಭಾ, ಚಿತ್ರದುರ್ಗ

## ಪತ್ರ ಮಥನ

ಝೀ ಕನ್ನಡದ ‘ಡ್ರಾಮಾ ಜೂನಿಯರ್ಸ್–4’ರಲ್ಲಿ, ಈಗಿನ ಮೊಬೈಲ್ ಹಾಗೂ ಅಂಚೆ ಅಂತರ್ದೇಶಿ ಪತ್ರದ ಪ್ರಸಂಗ ಪ್ರಸಾರವಾಯಿತು. ಮೊಬೈಲ್ ಹಾಗೂ ಅಂತರ್ದೇಶಿ ಪತ್ರಗಳು, ತಮ್ಮ ತಮ್ಮ ಹೆಚ್ಚುಗಾರಿಕೆಯ ಬಗ್ಗೆ ಚರ್ಚಿಸಿದವು. ಅಂಚೆ ಇಲಾಖೆಯ ಪತ್ರವೇ ಮೇಲೆಂಬ ವಾದ ಸಂತೋಷ ತಂದಿದೆ. ಪತ್ರ ದೀರ್ಘಕಾಲ ಉಳಿಯುತ್ತದೆ. ನಾವು ಯಾವಾಗಲಾದರೂ ಓದಬಹುದು. ಮೊಬೈಲ್ ಬರಹ ಅಂತಹ ಸಂತೋಷ ನೀಡದು. ಇಂತಹ ವಿಶಿಷ್ಟ ಸಂಗತಿಗಳ ಚರ್ಚೆ ಖುಷಿಕೊಡುತ್ತದೆ.

—ಬಸಣ್ಣ ಎಸ್. ಮುಳ್ಳೂರ, ಹಲಗತ್ತಿ

## ಮಾಧ್ಯಮ ಹರಟೆ

ಪತ್ರಿಕೆಗಳ ಸುದ್ದಿ v/s ವಾಹಿನಿಗಳ ಸುದ್ದಿ ಎಂಬ ಶೀರ್ಷಿಕೆಯೊಂದಿಗೆ ಚಂದನದಲ್ಲಿ ಇತ್ತೀಚೆಗೆ ‘ಹರಟೆ’ ಕಾರ್ಯಕ್ರಮವೊಂದು ಪ್ರಸಾರವಾಯಿತು. ಯಥಾಪ್ರಕಾರ ಎರಡೂ ಮಾಧ್ಯಮಗಳ ಪರ–ವಿರೋಧ ಅಭಿಪ್ರಾಯಗಳು ವ್ಯಕ್ತವಾಯಿತು.

ಪತ್ರಿಕೆಗಳ ಬರಹದಿಂದ ಕೆಲವರಿಗಾದರೂ ಭಾಷಾ ಬೆಳವಣಿಗೆಗೆ ಕೊಂಚವಾದರೂ ಪ್ರಯೋಜನ ಆಗಿರಬಹುದು. ಈ ಮಾತನ್ನು ವಾಹಿನಿಗಳ ಸುದ್ದಿ ವಾಚಕರ ಭಾಷೆಯ ಬಗ್ಗೆ ಹೇಳುವಂತಿಲ್ಲ. ಕೆಲವರ ವಾರ್ತಾ ವಾಚನದಲ್ಲಿ ‘ಅ’ ಕಾರ, ‘ಹ’ ಕಾರ ದೋಷಗಳು ರಾರಾಜಿಸುತ್ತವೆ.

‘ಹೊಡಿ, ಬಡಿ’, ‘ಇವರಪ್ಪಂದ ಇದು?’, ‘ಬೆಂಡೆತ್ತಿಬಿಡ್ತೀನಿ’, ‘ಮುಖಮೂತಿ ನೋಡದೆ ಬಾರಿಸಬೇಕು’, ‘ನಾಲ್ಕು ಬಿಡೋದು ಬಿಟ್ಟು ಆರತಿ ಎತ್ತಬೇಕಾ ಅವರ ಮುಖಕ್ಕೆ’ – ಇಂಥ ಅಸಂಬದ್ಧ ಅಣಿಮುತ್ತುಗಳು ಪತ್ರಿಕೆಗಳಲ್ಲಿ ಪ್ರಕಟವಾಗುವುದಿಲ್ಲ. ಮುದ್ರಣ ದೋಷಗಳು ಇದ್ದರೂ ದುರುದ್ದೇಶದ ಭಾವನೆ ಕಡಿಮೆ. ಸಿನಿಮಾ ನಟಿ ಗರ್ಭಿಣಿಯಾದರೆ ಇಡೀ ರಾಜ್ಯವೇ ಖುಷಿ ಪಡುವಂತಹ ಸುದ್ದಿಗೆ ಪತ್ರಿಕೆಗಳಲ್ಲಿ ಆದ್ಯತೆ ಕಡಿಮೆ. ಬೆಳಗಿನಿಂದ ಸಂಜೆಯವರೆಗೆ ಒಂದೇ ಮಾಹಿತಿ ಬ್ರೇಕಿಂಗ್ ನ್ಯೂಸ್ ಆಗಿರುವುದಿಲ್ಲ.

—ಹೆಚ್.ವಿ. ಶ್ರೀಧರ್, ಬೆಂಗಳೂರು

## ರುಚಿಯಲ್ಲಿ ಕಹಿ

ಕಲರ್ಸ್ ಕನ್ನಡದಲ್ಲಿ ಇತ್ತೀಚೆಗೆ ಆರಂಭವಾಗಿರುವ ‘ಸವಿರುಚಿ’ ಕಾರ್ಯಕ್ರಮದಲ್ಲಿ ಮುರಳಿ ಅಡುಗೆ ಕಾರ್ಯಕ್ರಮವನ್ನು ಚೆನ್ನಾಗಿ ನಡೆಸಿಕೊಡುತ್ತಿದ್ದಾರೆ.

ಆಹ್ವಾನಿತ ಅತಿಥಿಗಳು ಅಡುಗೆ ಮಾಡಿದ ನಂತರ ತೆರಳುವಾಗ ಬಾಗಿಲಿಗೆ ಕೈ ಬೀಸುವುದನ್ನು ತೋರಿಸುತ್ತಾರೆ. ಇದು ಅತಿಥಿಗಳು ಸೇರಿದಂತೆ ಕಾರ್ಯಕ್ರಮವನ್ನು ವೀಕ್ಷಿಸುವ ನಮಗೂ ಸರಿ ಕಾಣಿಸುವುದಿಲ್ಲ.

—ಎ.ಪಿ. ರೇಣುಕಾ, ಮೈಸೂರು

## ‘ಕನ್ನಡತಿ’ ಹೀಗೇಕಾದಳು?

ಎರಡು ವರ್ಷಗಳ ಹಿಂದೆ ಕಲರ್ಸ್ ಕನ್ನಡದಲ್ಲಿ ಆರಂಭಗೊಂಡ ‘ಕನ್ನಡತಿ’ ವಿಭಿನ್ನ ಕಥಾಹಂದರದಿಂದ ಅನೇಕರನ್ನು ಆಕರ್ಷಿಸಿತ್ತು. ಇತ್ತೀಚೆಗೆ ಶೀರ್ಷಿಕೆಗೂ ಕಥೆಗೂ ಸಂಬಂಧವೇ ಇಲ್ಲದಂತೆ ತೆವಳುತ್ತಿದೆ. ನಾಯಕ–ನಾಯಕಿಯರ ಪಾತ್ರಗಳಿಗಿಂತ ಖಳನಾಯಕಿಯರ ಆರ್ಭಟಕ್ಕೆ ಹೆಚ್ಚು ಮಹತ್ವ ನೀಡಲಾಗುತ್ತಿದೆ.

ಒಂದು ಕಂಪನಿ ನಡೆಸುವ ಸಾಮರ್ಥ್ಯ ಇರುವ ಹೆಣ್ಣೊಬ್ಬಳು ನಾಯಕನಿಂದ ತಿರಸ್ಕಾರಕ್ಕೆ ಒಳಗಾದರೂ ಇನ್ನೂ ಅವನನ್ನು ಪಡೆದೇ ತೀರುವ ಹಟಕ್ಕೆ ಬಿದ್ದಿರುವುದು ತರ್ಕಕ್ಕೆ ದೂರವಾಗಿದೆ. ತನ್ನ ಆತ್ಮೀಯ ಗೆಳತಿಯೇ ಅವನ ಪ್ರೇಯಸಿ ಎಂದು ಗೊತ್ತಾದ ಮೇಲೂ ಇನ್ನೂ ಹೀರೊ ಜಪ ಮಾಡುತ್ತಿರುವುದು ಅಸಹ್ಯ ಹುಟ್ಟಿಸುವಂತಿದೆ. ಆ ಪಾತ್ರಕ್ಕೆ ಪ್ರಾಮುಖ್ಯತೆ ಕೊಟ್ಟು ಬೇರೆಲ್ಲರನ್ನೂ ಗೌಣ ಮಾಡುವುದು ಸರಿಯಲ್ಲ. ಅನೇಕರ ಭಾವನೆಗಳೊಂದಿಗೆ ಆಟವಾಡಿರುವ ಈ ಧಾರಾವಾಹಿಯನ್ನು ಹೀಗೆ ಮುಂದುವರೆಸುವ ಬದಲು, ಆದಷ್ಟೂ ಬೇಗ ಮುಗಿಸುವುದೇ ಉತ್ತಮ ಎಂದು ಅನಿಸುತ್ತದೆ.

—ಡಾ. ಗಾಯತ್ರಿ ದೇವಿ

‘ಕನ್ನಡತಿ’ ಮೊದಮೊದಲು ಜೀವನ ಮೌಲ್ಯ ಮತ್ತು ಶಬ್ದಾರ್ಥಗಳನ್ನು ವಿವರಿಸಿ ವೀಕ್ಷಕರಿಗೆ ಭಿನ್ನ ರುಚಿ ಉಣಿಸಿತು. ಇತ್ತೀಚಿನ ಒಂದು ಸಂಚಿಕೆಯನ್ನು ನೋಡಿ ಇದರಲ್ಲಿ ಏನು ಹೇಳಲು ಹೊರಟಿದ್ದಾರೆ ಎಂದು ತಿಳಿಯಲಿಲ್ಲ.

ವರೂ ತನ್ನ ಹೀರೊನ ಭಾವಚಿತ್ರಕ್ಕೆ ಮುತ್ತಿಡುತ್ತಾಳೆ. ಅದೂ ಆತ ಪ್ರಾಣ ಸ್ನೇಹಿತೆಯನ್ನು ಮದುವೆ ಆಗುತ್ತಿದ್ದಾನೆ ಎಂಬ ಸತ್ಯ ಗೊತ್ತಿದ್ದೂ. ಹೀಗೆ ಮಾಡುವುದು ಯಾರಿಗೆ ನೆಮ್ಮದಿ ಕೊಡುವುದೋ ತಿಳಿಯದು. ನೋಡುಗರಿಗೆ ಮುಜುಗರ ಕೂಡ ಹೌದು. ಹಾಗಾದರೆ ಈ ಮೊದಲು ಪ್ರತಿಪಾದಿಸಿದ ಮೌಲ್ಯಗಳು ಎಲ್ಲಿ ಹೋದವು?

—ದೀಕ್ಷಾ ಗಿರೀಶ, ಮೈಸೂರು

ಇನ್ನಾದರೂ ‘ಕನ್ನಡತಿ’ಗೆ ಮಂಗಳ ಹಾಡಿ. ಸಾನಿಯಾ ಕುತಂತ್ರ ಬಯಲು ಮಾಡಿ ವರೂ ಮೇಲಿರುವ ಆಪಾದನೆ ದೂರಮಾಡಿ ಸರಿಯಾದ ಅಂತ್ಯ ಕೊಡಿ. ಇನ್ನೂ ಮುಗಿಸದೆ ಇದ್ದಲ್ಲಿ ಧಾರಾವಾಹಿಯ ಗುಣಮಟ್ಟ ಕುಸಿದಂತೆ ಅದರ ದಾಖಲೆ ಮತ್ತು ಹೊಸತನದ ಹಿರಿಮೆಯೂ ಕುಸಿಯುತ್ತದೆ. ಹೀಗೂ ಒಂದು ಮಾಡಬಹುದು ಎನ್ನುವುದಕ್ಕೆ ಮಾದರಿಯಂತೆ ಇರುವಾಗಲೇ ಕೊನೆಗೊಳಿಸಿದರೆ ಒಳಿತು.

—ನಾಡಿಗ್ ರಾಮಚಂದ್ರ, ಬೆಂಗಳೂರು